<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.</u>

**<u>SC.282/2025</u>**

ಪಿರ್ಯಾದುದಾರರು : ಸರ್ಕಾರದ ಪರ ಆವಲಹಳ್ಳಿ ಪೊಲೀಸರು

- ವಿರುದ್ಧ -

ಆರೋಪಿತರು : ಪ್ರವೀಣ್,
ತಂದೆ: ಲೇಟ್ ಮಹಾಲಿಂಗಪ್ಪ,
ವಯಸ್ಸು 43 ವರ್ಷ
ವಾಸ: ಚೀಮಸಂದ್ರ ಗ್ರಾಮ,
ಬಿಡಹಳ್ಳಿ ಹೋಬಳಿ,
ಬೆಂಗಳೂರು ನಗರ.

ಸ್ವಂತ ವಾಸ : BLD ಆಸ್ಪತ್ರೆ ರಸ್ತೆ,
ಗಜ್ಜಗನಕಟ್ಟೆ ಕಾಲೋನಿ,
ಬಿಜಾಪುರ ಟೌನ್.

<u>ದೋಷಾರೋಪಣೆ</u>

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್‌ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ಪ್ರವೀಣ್ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ಘನ ನ್ಯಾಯಾಲಯದ ವ್ಯಾಪ್ತಿಗೆ ಸೇರಿರುವ ಅವಲಹಳ್ಳಿ ಪೊಲೀಸ್ ಠಾಣೆಯ ಸರಹದ್ದಿನ ಬಿದರಹಳ್ಳಿ, ಹೋಬಳಿ, ಚೀಮಸಂದ್ರ ಗ್ರಾಮದಲ್ಲಿ ಸಾಕ್ಷಿರವರಿಗೆ ಸೇರಿದ ನೆಲ ಮಹಡಿಯ ಮನೆಯಲ್ಲಿ ಬಾಡಿಗೆಗೆ ಈಗ್ಗೆ 06 ತಿಂಗಳಿನಿಂದ ಮೃತರಾದ ಶ್ರೀಮತಿ. ಅನ್ನಪೂರ್ಣ, ಅನ್ನಪೂರ್ಣ ರವರ ಮೊಮ್ಮಗ ಮೃತ ಶುಭಂ ಮತ್ತು ಆರೋಪಿಯಾದ ನೀನು ವಾಸವಾಗಿದ್ದು ಆರೋಪಿಯಾದ ನೀನು ಮದ್ಯಪಾನ ಮಾಡುವ ಅಭ್ಯಾಸದವನಾಗಿದ್ದು, ಆಗಾಗ್ಗೆ ನಿನ್ನ ತಾಯಿ ಮೃತೆ

ಅನ್ನಪೂರ್ಣ ರವರೊಂದಿಗೆ ಜಗಳ ಮಾಡುತ್ತಿದ್ದು, ನಿನ್ನ ತಾಯಿಯ ಕುರಿತು ನೀನು ನಿನಗೆ ವಯಸ್ಸಾಗಿದೆ ನಾನು ನಿನ್ನನ್ನು ಸಾಕಲು ಆಗುವುದಿಲ್ಲ, ಇದರ ಜೊತೆಗೆ ನಿನ್ನ ಮೊಮ್ಮಗನನ್ನು ನಿನ್ನ ಜೊತೆ ಇಟ್ಟುಕೊಂಡಿದ್ದಿಯಾ ಎಂದು ಯಾವಾಗಲೂ ಜಗಳ ಮಾಡುತ್ತಿದ್ದು, ಹೊಡೆಯುವುದು, ಬೈಯುವುದು ಮಾಡುತ್ತಿದ್ದು, ಚಾಸಾ. 1 ಮತ್ತು 2 ರವರು ಹಲವಾರು ಬಾರಿ ಆರೋಪಿಯಾದ ನಿನಗೆ ಬುದ್ದಿ ಹೇಳಿದರೂ ಕುಡಿದಾಗ ಮತ್ತೆ ಮನೆಯ ಹತ್ತಿರ ಗಲಾಟೆ ಮಾಡುತ್ತಿದ್ದು ಸುಮಾರು ದಿನಗಳಿಂದ ಮೃತ ಅನ್ನಪೂರ್ಣ ಮತ್ತು ಮೃತ ಶುಭಂರವರು ಮನೆಯ ಬಳಿ ಕಾಣಲಿಲ್ಲ ಹಾಗೂ ಆರೋಪಿಯಾದ ನೀನು ಮಾತ್ರ ಮನೆಗೆ ಬಂದು ಹೋಗುತ್ತಿದ್ದು ನಂತರ ದಿನಾಂಕ 05.05.2025 ರಂದು ಬೆಳಿಗ್ಗೆ 10.30 ಗಂಟೆಗೆ ಆರೋಪಿಯಾದ ನೀನು ವಾಸವಾಗಿದ್ದ ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಬೀಗದ ಕೈಯನ್ನು ಚಾಸಾ. 1 ರವರಿಗೆ ಕೊಡಲು ಹೋದಾಗ ಚಾಸಾ. 1 ಮತ್ತು 2 ರವರು ಮೃತ ಅನ್ನಪೂರ್ಣ ಮತ್ತು ಮೃತ ಶುಭಂ ಬಗ್ಗೆ ಕೇಳಿದಾಗ ಮೈಸೂರಿಗೆ ಹೋಗಿರುತ್ತಾರೆಂದು ತಿಳಿಸಿ ಹೋಗಿದ್ದು ನಂತರ ದಿನಾಂಕ 06.05.2025 ರಂದು ಮೃತ ಅನ್ನಪೂರ್ಣಮ್ಮರವರು ವಾಸವಾಗಿದ್ದ ಮನೆಯಿಂದ ಅತಿಯಾಗಿ ಕೆಟ್ಟ ವಾಸನೆ ಬರುತ್ತಿದ್ದು, ಚಾಸಾ. 1 ಮತ್ತು 2 ರವರು ಅಕ್ಕ-ಪಕ್ಕದ ಮನೆಯವರನ್ನು ಕರೆಸಿ ಮನೆ ಬಾಗಿಲು ಹೊಡೆದು ನೋಡಲಾಗಿ ರೂಮಿನಲ್ಲಿ ಅನ್ನಪೂರ್ಣಮ್ಮ ಮತ್ತು ಅವರ ಮೊಮ್ಮಗ ಶುಭಂ ರವರ ಶವವು ರೂಮಿನಲ್ಲಿ ಅಂಗಾತವಾಗಿ ಬಿದ್ದಿದ್ದು ಶವದ ಪಕ್ಕದ ಹಾಲ್ ನಲ್ಲಿ ಒಂದು ನೈಲಾನ್ ದಾರದಂತಿರುವ ಹಗ್ಗ ಬಿದ್ದಿದ್ದು ಎರಡು ಶವಗಳು ಕೊಳೆತು ಹುಳುಗಳು ಬಿದ್ದಿರುವಂತೆ ಕಂಡು ಬಂದಿದ್ದು ಶವದ ಕುತ್ತಿಗೆಯಲ್ಲಿ ಮಾರ್ಕ್ ಕಂಡು ಬಂದಿದ್ದು ಮೃತ ಅನ್ನಪೂರ್ಣಮ್ಮನವರ ಎರಡನೇ ಮಗನಾದ ಆರೋಪಿಯಾದ ನೀನು ನಿನ್ನ ತಾಯಿಯೊಂದಿಗೆ ಗಲಾಟೆಮಾಡಿ ದಿನಾಂಕ 02.05.2025 ರಿಂದ 06.05.2025 ರ ನಡುವೆ ಯವಾಗಲೋ

ಯಾವುದೋ ಸಮಯದಲ್ಲಿ, ಮನೆಯ ರೂಮಿನಲ್ಲಿ ನೈಲಾನ್ ಹಗ್ಗದಿಂದ ಕುತ್ತಿಗೆಗೆ ಬಿಗಿದು ಇಬ್ಬರನ್ನು ಉಸಿರುಗಟ್ಟಿಸಿ ಕೊಲೆ ಮಾಡಿ ಸಾಯಿಸಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 103 ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು,

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಮೃತ ಅನ್ನಪೂರ್ಣಮ್ಮ ಮತ್ತು ಅವರ ಮೊಮ್ಮಗ ಶುಭಂ ರವರ ಶವಗಳನ್ನು ಯಾರಿಗು ತಿಳಿಯದಂತೆ ಹಾಗೂ ಕೊಲೆಯನ್ನು ಮರೆಮಾಚುವ ಉದ್ದೇಶದಿಂದ ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಹೋಗಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 238 ರನ್ವಯ ಅಪರಾಧ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಈ ದಿನ ದಿನಾಂಕ 08 ನೇ ಜನವರಿ, 2026)**

**(ಶ್ರೀಮತಿ ಬಿ.ಎಸ್.ರೇಖಾ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.